Regd No BG 155

Sri "SATYAVADI"
— DAILY —
MYSORE 4
46 th Year

Protect the cow

— ೨೯ —

ಸತ್ಯವಾದಿ
SATYAVADI

ದಿ. 8—5—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ಕಿಂಗಳಿಗೆ 6 ಆಣೆ

ಸ್ಥಾಪಕರು— ಆರಮನೆ ಸಿಂಸ್ಥೇದಾರ್ ಎಂ. ಎ. ಸುಬ್ಬರಕಯ್ಯರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ಚೀನಾ-ಪಾಕಿಸ್ತಾನ ಒಪ್ಪಂದ ಪರಮಾಧಿಕಾರದ ಹನನಕ್ಕೆ ಎಡೆ

ಪ್ರಧಾನಿ ಪಂ॥ ನೆಹರು ಲೋಕಸಭೆಯಲ್ಲಿ ನಿನ್ನೆ ವಿವರಣೆಯಿತ್ತು, ತಮ್ಮ ಒಂದೇ ಗಡಿಯನ್ನು ಸ್ಥಳೀಕರಿಸಲು ಪಾಕಿಸ್ತಾನ ಹಾಗೂ ಚೀನಾಗಳಿಗೆ ಆಗಿರುವ ಒಡಂಬಡಿಕೆ ಕಾಶ್ಮೀರದ ಮೇಲಿನ ಭಾರತದ ಪರಮಾಧಿಕಾರದಲ್ಲಿ ಹಸ್ತಕ್ಷೇಪ ಮಾಡಿದಂತೆ ಆಗುವದು ಎಂದರು.

ನಿಜಲಿಂಗಪ್ಪನವರ ಅವಿರೋಧ ಆಯ್ಕೆ

ಬಿಜಾಪುರ ಜಿಲ್ಲೆಯ ಬಾಗಲ್ಕೋಟೆ ಕ್ಷೇತ್ರದಿಂದ ಪ್ರದೇಶ ಕಾಂಗ್ರೆಸು ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ಅವಿರೋಧವಾಗಿ ಚುನಾಯಿತರಾದರು. ಅವರ ವಿರುದ್ಧ ಸ್ಪರ್ಧಿಸಿದ್ದ 5 ಮಂದಿ ತಮ್ಮ ನಾಮಪತ್ರವನ್ನು ವಾಪಸು ಪಡೆದರು. ಶಾಸನ ಸಭೆ ಕಾಂಗ್ರೆಸು ಪಕ್ಷದ ನಾಯಕತ್ವವನ್ನು ನಿಜಲಿಂಗಪ್ಪನವರು ಅವಿರೋಧ ಆಯ್ಕೆ ಅನುಕೂಲ ಮಾಡಿದೆ

ಇಂದಿರಾಗಾಂಧಿ ಅಧ್ಯಕ್ಷೆ

ಜೂನ್ 4 ಮತ್ತು 5 ನೆಯ ತಾ॥ ನವ ದೆಹಲಿಯಲ್ಲಿ ಅಖಿಲ ಭಾರತ ಕಾಂಗ್ರೆಸು ಕಾರ್ಯಕಾರಿ ಸಮಿತಿ ಸಮಾವೇಶ ವಾಗುವದು ರಾಜೀನಾಮೆ ಅಂಗೀಕೃತವಾಗಿರುವ ಶ್ರೀ ಎಸ್. ನಿಜಲಿಂಗಪ್ಪನವರ ತೆರವಾಗುವ ಸ್ಥಾನದಲ್ಲಿ ಕಾಂಗ್ರೆಸು ಅಧ್ಯಕ್ಷರ ಚುನಾವಣೆ ನಡೆಯುವುದು ಈ ಸ್ಥಾನದ ಅಪೇಕ್ಷೆ ಇಲ್ಲದೆ ಇದ್ದಾಗ್ಯೂ ಶ್ರೀಮತಿ ಇಂದಿರಾಗಾಂಧಿ ಕಾಂಗ್ರೆಸಿನ ಅಧ್ಯಕ್ಷರಾಗುವ ಸಂಭವವಿದೆ.

೦೦೦

ಈ ಮಾಹೆ 1 ರಂದು ಸಹರಾದಲ್ಲಿ ಫ್ರಾನ್ಸ್ ಅಣು ಪ್ರಯೋಗ ಮಾಡಿತೆಂದು ಪ್ಯಾರಿಸ್ಸಿನಲ್ಲಿ ನಿನ್ನೆ ಪ್ರಕಟವಾಗಿದೆ.

ಉಪಾಧ್ಯಕ್ಷರಾಗಿ ಡಾ॥ ಜಕೀರ್ ಹುಸೇನ್

ಭಾರತ ಪಾರ್ಲಿಮೆಂಟಿನ ಉಭಯ ಸದನಗಳು, ಬಿಹಾರಿನ ರಾಜ್ಯಪಾಲರ ಪದವಿಯಿಂದ ನಿವೃತ್ತರಾಗುವ ಮತ್ತು ಸುಪ್ರಸಿದ್ಧ ಶಿಕ್ಷಣ ತಜ್ಞರಾದ ಡಾ॥ ಜಕೀರ್ ಹುಸೇನ್‌ರನ್ನು ಭಾರತದ ಉಪಾಧ್ಯಕ್ಷರನ್ನಾಗಿ ನಿನ್ನೆ ಆರಿಸಿತೆಂದು ನವದೆಹಲಿ ವಾರ್ತೆ. ಡಾ॥ ಜಕೀರ್ ಹುಸೇನರಿಗೆ 568 ಮತಗಳು ಮತ್ತು ಅವರ ಎದುರೇ ಪ್ರತಿಸ್ಪರ್ಧಿ ಶ್ರೀ ಸಂಪತ್ ಸಿನ್ಹಾರಿಗೆ ಹದಿನಾಲ್ಕು ಮತಗಳು ಬಂದಿವೆ ಹೊಸ ಅಧ್ಯಕ್ಷರು ಸಮ್ಮುಖದಲ್ಲಿ ಅವರು 13 ನೆಯ ತಾ॥ ಪ್ರಮಾಣ ವಚನವನ್ನು ಸ್ವೀಕರಿಸುವರು.

ಮಾತುಕತೆ

ಭಾರತದಲ್ಲಿ ಅಮೆರಿಕದ ರಾಯಭಾರಿಯಾಗಿರುವ ಗಾಲ್ಬ್ರೈತರು ಮತ್ತು ಅಮೆರಿಕದ ಸಂಸ್ಥಾನಿ ಕಾರ್ಯದರ್ಶಿ ಡೀಕನ್ ರಸ್ಕ್‌ರು ಭಾರತಕ್ಕೆ ಕೊಡುವ ನೆರವಿನ ವಿಷಯದಲ್ಲಿ ಬೊಂಬಾಯಿನ ಸೆಂಟಕ್ರೂಜ್ ವಿಮಾನ ನಿಲ್ದಾಣದಲ್ಲಿ ನಿನ್ನೆ ಸ್ವಲ್ಪಹೊತ್ತು ಚರ್ಚಿಸಿದರು. ಕಾಶ್ಮೀರಕ್ಕೆ ಹೋಗುವ ದಾರಿಯಲ್ಲಿ ಅವರು ಸ್ವಲ್ಪ ವೇಳೆ ಇಳಿದಿದ್ದರು.

★

ಕಾಸ್ಮೀರದಲ್ಲಿ ಮುಂದಿನ ಕಾಂಗ್ರೆಸು ಅಧಿವೇಶನವನ್ನು ಜನವರಿಯಲ್ಲಿ ನಡೆಸುವ ಪಂತೆ ಉತ್ತರ ಪ್ರದೇಶ ಕಾಂಗ್ರೆಸು ಸಮಿತಿ ಕೋರಿದೆ

ಬದ್ರಿನಾಥ ದೇವಾಲಯ ವೇದಘೋಷಗಳ ವಧೆ ಭಾನುವಾರ ಬೆಳಿಗ್ಗೆ ಮತ್ತೆ ತೆರೆಯಲ್ಪಟ್ಟಿತು. ಆರು ಸಹಸ್ರ ಯಾತ್ರಿಕರು ಹಾಜರಿದ್ದರು.

ರಾಷ್ಟ್ರಪತಿಯವರ ಚುನಾವಣೆ

ಭಾರತದ ಉಪಾಧ್ಯಕ್ಷರಾಗಿ ಆಯ್ಕೆಗಾಗಿ ಪಾರ್ಲಿಮೆಂಟು ಸದಸ್ಯರು ಮತ್ತು ರಾಜ್ಯಗಳ ವಿಧಾನ ಸಭೆಗಳ ಸದಸ್ಯರು ಮತದಾನ ಮಾಡಿದರು. ಪ್ರಾವಿಡ ಮುನ್ನೇತ್ರ ಕಳಗಂ ಚುನಾವಣೆಯನ್ನು ಬಹಿಷ್ಕರಿಸಿದ್ದಾಗ್ಯೂ ಮದ್ರಾಸಿನಲ್ಲಿ ಆ ಪಕ್ಷದ ಒರ್ವ ಸದಸ್ಯರು ಮತದಾನ ಮಾಡಿದರು. ಈ ಮಾಹೆ 11 ನೆಯ ತಾ॥ ಓಟಗಳ ಎಣಿಕೆ ಆಗುವದು. ಹೊಸ ಅಧ್ಯಕ್ಷರು ಈ ಮಾಹೆ 13 ರಂದು ಪದವಿ ಕಾರವನ್ನು ಸ್ವೀಕರಿಸುವ ಮೂ. ಅಧ್ಯಕ್ಷರ ಚುನಾವಣೆಗೆ ಸ್ಪರ್ಧಿಸಿರುವವರು ಡಾ॥ ರಾಧಾಕೃಷ್ಣನ್, ಶ್ರೀ ಚೌಧುರಿ ರಾಮ ಮತ್ತು ಶ್ರೀ ವೈ ಪಿ ತ್ರಿಸುಲ್ಲ

ರಷ್ಯ ಭಾಗವಹಿಸದು

ಹದಿನೇಳು ರಾಷ್ಟ್ರಗಳ ನಿಶ್ಶಸ್ತ್ರೀಕರಣ ಸಮ್ಮೇಳನದ ರಷ್ಯ ನಿಯೋಗದ ನಾಯಕ ವಲೆರಿಯನ್ ಜೋರಿನ್ ನಿನ್ನೆ ಜಿನೀವಾದಲ್ಲಿ ಪತ್ರಿಕಾ ವರೋಡನೆ ಮಾತನಾಡುತ್ತಾ, ಅಣು ಪ್ರಯೋಗ ನಿಷೇಧ ಮಾತುಕತೆಗಳಲ್ಲಿ ರಷ್ಯ ಭಾಗವಹಿಸುವದಾಗಿ ತಿಳಿಸಿದರು.

ಮಹಿಳೆಯರ ಸಾಹಸ

ಅನೀತಿ ಆರೋಪದ ಮೇಲೆ ಊರ್ವರು ಮಹಿಳೆಯರನ್ನು ತೈಕಾಡಿನ ಮಹಿಳೆಯರಾಹಾಗೂ ವಕ್ಕಳ ಆಸ್ಪತ್ರೆಯಲ್ಲಿ ಇಡಲಾಗಿತ್ತೆಂದು ತಿರುವೇಂದ್ರಂ ವರದಿ ಶನಿವಾರದಿಂದ ಅವರು ಪತ್ತೆ ಇಲ್ಲ. ವೆಂಟಿಳೇಟರು ಮುರಿದು ತಪ್ಪಿಸಿಕೊಂಡಿರುವರು

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ ದೈವಜ್ಞಶಿಖಾಮಣಿ ಸಂಪಶ್ಯನ್ಮ ಜೋಯಿಸರಿಂದ

9 ಷಷ್ಠಿ — ಪುಸರ್ವಸು

× ಮಾಸ್ಕೋದಲ್ಲಿರುವ ಭಾರತ ರಾಯಭಾರಿ ರಷ್ಯದಲ್ಲಿ ಎಲ್ಲಿ ಹೋಗಲು ತೊಂದರೆ ಇಲ್ಲವೆಂದು ರಾಜ್ಯಸಭೆಯಲ್ಲಿ ನಿನ್ನೆ ಪಂ॥ ನೆಹರು ಹೇಳಿದರು.

ವಿವಿಧ ವಿಷಯಗಳು

ಕವ ಕ್ಯಾನಿಸ್ಟರಿಗೆ ಮತ್ತು ಅಪರ ಪಹಾನುಭೂತಿದಾರರಿಗೆ ನೌಕರಿ ನಿರಾಕರಿಸುವಂತೆ ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರ ಸೂಚಿಸಿಲ್ಲವೆಂದು ಗೃಹಮಂತ್ರಿ ಶ್ರೀ ಲಾಲಬಹದ್ದೂರ ಶಾಸ್ತ್ರಿ ಲೋಕಸಭೆಯಲ್ಲಿ ತಿಳಿಸಿದರು.

ಗುಜರಾತಿನ ಮೆಹಸಾಣಕ್ಕೆ ಸುಮಾರು 35 ಮೈಲಿಗಳ ದೂರದ ಕಲೋಲ್ ತಾಲ್ಲೂಕಿನ ಜಮಂಪುರದಲ್ಲಿ ಸ್ವಿಡ್ಜರ್ಲೆಂಡಿನಿಂದ ಒಂದ ಕಾಣಿಕೆಗಳಿಂದ ಒಂದು ಗೋಶಾಲೆ ನಿರ್ಮಿತವಾಯಿತು.

ಭಾರತ ಅಧ್ಯಕ್ಷರ ಚುನಾವಣೆಯಲ್ಲಿ ಪ್ರಧಾನಿ ನೆಹರು ನಿನ್ನೆ ತಪ್ಪು ಬರೆದ ಕಾರಣ ಅದು ಕೆಟ್ಟಿತು ಕರ್ನಲ್ ಮುತ್ತೊಂದು ಓಟಿನ ಚೀಟಿಗೆ ಅರ್ಜಿಹಾಕಿ ಅದರಲ್ಲಿ ಸರಿಯಾಗಿ ಬರೆದರು

ಇಡೀ ಕಾಶ್ಮೀರ ಭಾರತಕ್ಕೆ ಸೇರಿದು ದೆಂದು ಭಾರತ ಕಮ್ಯೂನಿಸ್ಟ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಇ ಎಂ ಎಸ್ ನಂಬೂದರಿಪಾದ್ ತಿರುವೇಂದ್ರಂನಲ್ಲಿ ನಿನ್ನೆ ತಿಳಿಸಿದರು.

ಗೋವಾಕ್ಕೆ ಪ್ರವೇಶಿಸುವ ರಹದಾರಿ ಕ್ರಮ ಬೇಗನೆ ರದ್ದಾಗುವದೆಂದು ವಿದೇಶ ವ್ಯವಹಾರ ಉಪ ಮಂತ್ರಿ ಶ್ರೀಮತಿ ಲಕ್ಷ್ಮೀ ಮೆನನ್ ನಿನ್ನೆ ಲೋಕಸಭೆಯಲ್ಲಿ ತಿಳಿಸಿದರು

★

ಅಣು ಪ್ರಯೋಗ — ಆತ್ಮಹತ್ಯೆ

ಅಣು ಪ್ರಯೋಗದ ಆರಂಭವಾದು ದನ್ನು ಪ್ರತಿಭಟಿಸಿ 73 ವರ್ಷದ, ಅಣು ಬಾಂಬು ರೋಗಿ ಸೆಲೂಟಿ ಮಾತ್ಸುಷಿಮ 5 ನೆಯ ತಾ॥ ಬೆಳಿಗ್ಗೆ ಇರಿದುಕೊಂಡು ಆತ್ಮಹತ್ಯೆ ಮಾಡಿಕೊಂಡನು

ಶಾಂತಶಾಗರದಲ್ಲಿ ಮೊನ್ನೆ ಅನೇರಿಕ 5 ನೆಯ ಅಣು ಪ್ರಯೋಗ ನಡೆಸುತ್ತೆ ಎಂದು ವಾಷಿಂಗ್ಟನ್ನಿನಲ್ಲಿ ನಿನ್ನೆ ಅಣು ಶಕ್ತಿ ಸಮಿತಿ ಪ್ರಕಟಿಸಿದೆ.

ಚೀನೀಯರ ಉಚ್ಚಾಟನೆ

ನವದೆಹಲಿ 7— ಈ ಏಪ್ರಿಲ್ 16 ರವರಿಗೆ ಒಟ್ಟು 83 ಚೀನೀ ರಾಷ್ಟ್ರೀಯರನ್ನು ಭಾರತದಿಂದ ಉಚ್ಚಾಟನೆ ಮಾಡಲಾಗಿದೆ ಎಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

ಅಂಕಿ-ಅಂಶ

ತೃತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಶಿಕ್ಷಣ ಮತ್ತು ತರಬೇತಿಗಾಗಿ 765ಕೋಟಿ ರೂಗಳನ್ನು ಒದಗಿಸಲಾಗಿದೆ ; ಇದರ ಜೊತೆಗೆ ಈ ಅವಧಿಯಲ್ಲಿ 700 ಕೋಟಿ ರೂಗಳ ನಿರ್ವಹಣೆ ವೆಚ್ಚವು ಇರುವುದು — ತೃತೀಯ ಯೋಜನಾವಧಿಯಲ್ಲಿ ಶಿಕ್ಷಣಾಭಿವೃದ್ಧಿಯನ್ನು ಹಣದ ರೂಪದಲ್ಲಿ ಹೇಳುವುದಾದರೆ 2100 ಕೋಟಿ ರೂಗಳಿಷ್ಟು.

ಪಾಶ್ಚಾತ್ಯವಸ್ತುಸಂಗ್ರಹಾಲಯಗಳು

ಭಾರತದಲ್ಲಿ ಪಾಶ್ಚಾತ್ಯವಸ್ತು ಸಂಗ್ರಹಾಲಯಗಳು ದೆಹಲಿ, ಸಾರನಾಥ್, ನಲಂದ, ಕೊಂಡಾಪುರ, ಶಾಂಚಿ, ನಾಗಾರ್ಜುನಕೊಂಡ, ಮುದಂತಾಸು, ಅಮರಾವತಿ, ಬಜುರಾಹೂ, ಹಂಪೆ, ಬುದ್ಧಗಯಾ, ಶ್ರೀರಂಗಪಟ್ಟಣ, ಹಳೇಬೀಡು, ಕಲ್ಕತ್ತೆಯ ಖ್ಯಾತೀಯ ವಸ್ತು ಸಂಗ್ರಹಾಲಯದ ಪಾಶ್ಚಾತ್ಯವಸ್ತು ವಿಭಾಗ, ಎಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

ಅಂತರ್ಪಟ

ಮೈಸೂರು ? — ಚಿ॥ ಟಿ ಸೋಮು (ಶ್ರೀ ಎಂ ಸಿ ತಿಮ್ಮಯ್ಯಾಚಾರ್ ರವರ ಪುತ್ರ) ಮತ್ತು ಸೌ ॥ ವಿಜಾಕ್ಷಿ (ವಿದ್ವಾನ್ ಶ್ರೀ ಗೋಪಾಲಾಚಾರ್ ರವರ ಪುತ್ರಿ) ಇವರ ವಿವಾಹ ಮಹೋತ್ಸವದ ಸಂಬಂಧವಾಗಿ ಅಂತರ್ಪಟ ಶಾಸನಾಂಧ್ರವು ವೈಭವವಾಗಿ ನೆರವೇರಿತು.

ಸಂಕ್ರಾಂತಿ - ಗೀತೆ

ಇಂದಿನಾ ವಿಶ್ವದಲ್ಲಿ ಹೆಜ್ಜೆ ಹೆಜ್ಜೆಗು ಕ್ರಾಂತಿ
ಸುತ್ತಮುತ್ತಲು ಸರ ಓಡಿಹೋಗಿದೆ ಶಾಂತಿ |
ಯುಗ ಯುಗದ ಹೋರಾಟ, ವಾತಾವರಣ ಉತ್ಕ್ರಾಂತಿ,
ಕ್ರಾಂತಿ, ಶಾಂತಿಯು ನಡುವೆ ನಿತ್ಯ ಸಂಭ್ರಾಂತಿ ||

ನಮಗಾಗಿ ಬೇಡುತಿದೆ ನಿಶ್ಚಿಂತ ವಿಶ್ರಾಂತಿ
ಸ್ಥಾಪಿಸು, ವಿಶ್ವದಲಿ ನಿರಪೇಕ್ಷ ಚಿರಶಾಂತಿ |
ಹರಿದೊಗೆ, ಕುದ್ರವೀ ' ನನ್ನದೆಂ ' ಬುವ ಭ್ರಾಂತಿ
ಪ್ರಾರ್ಥಿಸುವೆ ನಾ ನಿನ್ನ ; ದೇವಿ ಸಂಕ್ರಾಂತಿ |

[ಕನ್ನಡ ನುಡಿ]

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳಿಂದ ಕೂಡಿದ ಏಕೈಕ ಕನ್ನಡ ಪತ್ರಿಕೆ.

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ ಮಹಿಮಾನ್ವಿತ 13 ನೇ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆ

ಸಂಗೀತ- ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಜನಪ್ರಿಯ 3 ನೇ ವಾರ

ಸಂಪೂರ್ಣ ರಾಮಾಯಣ

- ಕನ್ನಡ -

[ಪೂರ್ಣ ವರ್ಣರಂಜಿತ ಚಿತ್ರ] [ದಿನವಹಿ 3 ಆಟಗಳು]

Help The 'Gorakshana'

Advertise in Goraksana and help the pious cause



ಆವೇರಿಕಾ ಕಾರ್ಮಿಕ ವರ್ಗ ಅಭಿವೃದ್ಧಿಯ ಬಗ್ಗೆ ಸಂಬಂಧಿಸಿದ ಚಿತ್ರಗಳು

Edited, Printed & Published by the Proprietor, Dharma Prachara Nirata M. S. Krishna Rao, at the Sahavadi Press, Chamarajapuram, Mysore 4.